ಗಿರಿಜನರಿಗಾಗಿ ಭೂಮಿ ಗುರುತಿಸುವ ಕಾರ್ಯ

340 (257) ಶ್ರೀ ಯೋಗಿಶ್ ಭಟ್ .ಎನ್. (ಮಂಗಳೂರು) : ಮಾನ್ಯ ಸಮಾಜ ಕಲ್ಯಾಣ ಸಚಿವರು. ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಎಷ್ಟು ಗಿರಿಜನರಿದ್ದಾರೆ; ಯಾವ ಜಿಲ್ಲೆಯಲ್ಲಿ ಜಾಸ್ತಿ ವಾಸಿಸುತ್ತಿದ್ದಾರೆ;

ಆ) ಈ ಕುಟುಂಬಗಳಿಗೆ ಜೀವನ ನಿರ್ವಹಣೆಗೆ ಅನುಕೂಲವಾಗುವಂತೆ ಕೃಷಿ ಭೂಮಿಯನ್ನು ಒದಗಿಸುವ ಉದ್ದೇಶ ಸರ್ಕಾರಕ್ಕಿದೆಯೇ;

ಇ) ಹಾಗಿದ್ದಲ್ಲಿ ಭೂಮಿ ನೀಡಲು ಗುರುತಿಸುವ ಕಾರ್ಯ ಆರಂಭವಾಗಿದೆಯೇ ಇದಕ್ಕಾಗಿ ಎಷ್ಟು ಭೂಮಿ ಕಾಯ್ದಿರಿಸಲಾಗಿದೆ;

ಈ) ಫಲಾನುಭವಿಗಳಿಗೆ ತಲಾ ಎಷ್ಟು ಭೂಮಿ ನೀಡಲಾಗುವುದು, ಇದಕ್ಕೆ ನೀಡುವ ಭೂಮಿ ಅರಣ್ಯ ಜಾಗವೇ ಅಥವಾ ಕಂದಾಯ ಜಾಗವೇ ವಿವರ ನೀಡುವುದು?

ಶ್ರೀ ಕಾಗೋಡು ತಿಮ್ಮಪ್ಪ (ಸಮಾಜ ಕಲ್ಯಾಣ ಸಚಿವರು) :

ಅ) 1991ರ ಜನಗಣತಿ ಪ್ರಕಾರ ರಾಜ್ಯದಲ್ಲಿರುವ ಗಿರಿಜನ ಸಂಖ್ಯೆ 19,14,691 ಆಗಿರುತ್ತದೆ. 1991ರ ಜನಗಣತಿ ಪ್ರಕಾರ ಚಿತ್ರದುರ್ಗ (ಈಗಿನ ದಾವಣಗೆರೆ ಜಿಲ್ಲೆ ಸೇರಿ) ಬಳ್ಳಾರಿ, ಬೀದರ್, ರಾಯಚೂರು, ತುಮಕೂರು, ಕೋಲಾರ, ದಕ್ಷಿಣ ಕನ್ನಡ, ಮೈಸೂರು (ಚಾಮರಾಜನಗರ ಸೇರಿ) ಕೊಡಗು, ಉಡುಪಿ, ಚಿಕ್ಕಮಗಳೂರು, ಧಾರವಾಡ (ಹಾವೇರಿ, ಗದಗ ಸೇರಿ) ಗುಲ್ಬರ್ಗಾ, ಶಿವಮೊಗ್ಗ, ಬೆಳಗಾಂ ಜಿಲ್ಲೆಗಳಲ್ಲಿ ಪರಿಶಿಷ್ಟ ವರ್ಗಗಳ ಜನರು ಹೆಚ್ಚಾಗಿ ವಾಸಿಸುತ್ತಾರೆ.

ಆ) ಕರ್ನಾಟಕ ಪರಿಶಿಷ್ಟ ಜಾತಿ:ಪರಿಶಿಷ್ಟ ವರ್ಗಗಳ ಅಭಿವೃದ್ಧಿ ನಿಗಮದ ಭೂ ಒಡೆತನ ಯೋಜನೆಯಡಿ ಒದಗಿಸುವ ಕಾರ್ಯಕ್ರಮವನ್ನು 1990-91ನೇ ಸಾಲಿನಿಂದ ಜಾರಿಗೆ ತರಲಾಗಿದೆ.

ಇ) 1990-91ನೇ ಸಾಲಿನಿಂದ ಭೂಮಿ ನೀಡುವ ಕಾರ್ಯ ಪ್ರಾರಂಭಗೊಂಡಿದೆ. ಇದಕ್ಕಾಗಿ ಭೂಮಿಯನ್ನು ಕಾಯ್ದಿರಿಸುವುದಿಲ್ಲ. ಆದರೆ ಜಮೀನು ಮಾರಲು ಇಚ್ಚಿಸುವ ಬೇರೆ ಜನಾಂಗದವರಿಂದ ಕೃಷಿಗೆ ಯೋಗ್ಯವಾದ ಭೂಮಿಯನ್ನು ಖರೀದಿಸಿ, ಸದರಿ ಜಮೀನನ್ನು ಪರಿಶಿಷ್ಟ ಜಾತಿ ಮತ್ತು ಪರಿತಿಷ್ಟ ವರ್ಗದ ಜನಾಂಗದವರಿಗೆ ನೀಡಲಾಗುವುದು. ಇದುವರೆವಿಗೂ 2228 ಪರಿಶಿಷ್ಟ ವರ್ಗದವರಿಗೆ 3247.16 ಖುಷ್ಕಿ ಜಮೀನು, 649.36 ತರಿ ಜಮೀನನ್ನು ಖರೀದಿಸಿ ಕೊಡಲಾಗಿದೆ.

ಈ) ಈ ಯೋಜನೆಯಡಿ ಕೃಷಿ ಕಾರ್ಮಿಕರಿಗಾಗಿ 2.00 ಎಕರೆ ಖುಷ್ಕಿ ಅಥವಾ 1.00 ಎಕರೆ ತರಿ ಜಮೀನನ್ನು ಗರಿಷ್ಟ ಮಿತಿ ರೂ.60,000-00 ವೆಚ್ಚದಲ್ಲಿ ಖರೀದಿಸಿ ಕೊಡಲಾಗುತ್ತಿದೆ. ಇದರಲ್ಲಿ ಶೇಕಡ 50 ಭಾಗದಷ್ಟು ಸಹಾಯಧನ ಮತ್ತು ಶೇಕಡ 50 ರಷ್ಟು ಸಾಲವಾಗಿರುತ್ತದೆ. ನಿಗಮವು ಜಮೀನು ಮಾರಲಿಚ್ಚಿಸುವವರಿಂದ ಕೃಷಿಗೆ ಯೋಗ್ಯವಾಗಿರುವ ಜಮೀನನ್ನು ಖರೀದಿಸಿ ಫಲಾನುಭವಿಗಳಿಗೆ ನೀಡಲಾಗುತ್ತಿದೆ.

ಅಧ್ಯಕ್ಷರು: ಪ್ರಶ್ನೋತ್ತರಗಳನ್ನು ಮಂಡಿಸಲಾಯಿತು